Doc-494
T-P-2

Reg No B G 155 13 — 6 — 72

55th Year of Publication ‘Satyavadi’ daily, Mysore 4

In the State — The First
Golden Jubilee
Celebrated Paper
★
News Views, Dharmic
Moral Ethical Matters



ರಾಜ್ಯದಲ್ಲಿ ಪ್ರಥಮ
ಸ್ವರ್ಣ
ಮಹೋತ್ಸವ
ಪೂರೈಸಿದ
ಪತ್ರಿಕೆ

ಸ್ಥಾಪಕರು: ಆರಮನೆ ಸಿರಸ್ತೇದಾರ್ ಎಂ.ವಿ. ಸುಬ್ಬರಾವ್ ಸಂಪಾದಕರು ಧರ್ಮಪ್ರಚಾರಸಿಂಹ ಎಂ. ಎಸ್. ಕೃಷ್ಣರಾವ್ [2 ಪೈಸೆ

ಸಂಸತ ನಿಲಿಸದಿರಲು ಫಿಲೋಮಿನ, ಟೆರಿಷಿಯನ್ ಕಾಲೇಜ ಗಳಿಗೆ ಕರೆ

ರಲ

ಕಾರ್ ಸಿಡಿದು ಸಾವು

ಲೆಮಾನ್ಸ್‌ನಲ್ಲಿ 24 ಗಂಟೆ ಮೋಟಾರ್ ರೇಸ್‌ನಲ್ಲಿ ಸ್ವೀಡನ್ನಿನ 42 ವರ್ಷದ ಜೋ ಚಿಂಬೋನಿಯಾರ್ ಕಾರ್ ಸಿಡಿದು ನಂತರ ಸತ್ತನು

ಕಾರ್ಯಕ್ರಮ ನಿರ್ಧಾರ

ಭಾರತ ಹಾಗೂ ಬಂಗ್ಲಾ ದೇಶಗಳ ಉಭಯ ಪ್ರಯೋಜನಕ್ಕಾಗಿ ವ್ಯಾಪಾರ ಹಾಗೂ ಕೈಗಾರಿಕೆ ಸಹಕಾರ ವಿಸ್ತರಣ ಕುರಿತು ಕಾರ್ಯಕ್ರಮನು ನಿರ್ಧರಿಸಲಾಗಿದೆ ಈ ಆರ್ಥಿಕ ವರ್ಷದ ಕತೆಯೊಳಗೆ ಎರಡು ದೇಶಗಳಲ್ಲಿನ ವ್ಯಾಪಾರ ನೂರು ಕೋಟಿ ಮುಟ್ಟುವ ನಿರೀಕ್ಷೆ ಇವೆ

★

ಮೈಸೂರು ಲಾಟರಿ-

ಭಾನುವಾರ ಬೆಂಗಳೂರಿನಲ್ಲಿ ತೆಗೆದ ಮೈಸೂರು ಲಾಟರಿಯಲ್ಲಿ ಎಫ್ ಬಿ ಸೀರೀಸ್‌ನ ಮೊದಲನೆ ಬಹುಮಾನ 1 ಲಕ್ಷ ರೂ ದೆಹಲಿಗೆ ಹೋಯಿತು ಎಫ್‌ಎ ಸೀರೀಸ್‌ನಲ್ಲಿ ಜೆಂಗಳೂರಿಗೆ ಹೋಯಿತು.

★

ಹೆಡ್ಡಿಯವರ ನುತಿ

ಒಂದು ಸಂಸಾರಕ್ಕೆ ಹತ್ತು ಎಕರೆ ಭೂ ಪರಿಮಿತಿ ಗ್ರಾಮಗಳನ್ನು ಬಡತನಗೊಳಿಸುವುದಲ್ಲದೆ ದೇಶಾದ್ಯಂತ ಆಂದೋಳನ ಸೃಷ್ಟಿಸುವುದಾಗಿದೆ ಎಂದು ಪ್ರದೇಶ ಸಂಸ್ಥಾ ಕಾಂಗ್ರೆಸ್ ಉಸಾಧ್ಯಕ್ಷ ಶ್ರೀ ಬಿ. ರಾಮಕೃಷ್ಣ ಹೆಡ್ಡಿ ಬೆಂಗಳೂರಿನಲ್ಲಿ ತಿಳಿಸಿದರು.

★

ದಿವ್ಯವಾಣಿ

ಒಬ್ಬ ಮಿತ್ರನಿಲ್ಲದ ಜೀವನವು, ಒಬ್ಬ ಸಾಕ್ಷಿಯಿಲ್ಲದ ಸಾವಿನಂತೆ

— ಜಾರ್ಜ್ ಹರ್ಬರ್ಟ್

ರಾಷ್ಟ್ರೀಕರಣದ ಬೆದರಿಕೆ

ಚಾಮರಾಜನಗರ– ಬೀಡಿ ಕಾರ್ಮಿಕರ ಹಿತವನ್ನು ನಿರ್ಲಕ್ಷಿಸುವುದನ್ನು ಬೀಡಿ ಸಂಸ್ಥೆಗಳು ಮುಂದುವರಿಸಿದರೆ-ಬೀಡಿ ಕೈಗಾರಿಕೆಯನ್ನು ರಾಷ್ಟ್ರೀಕರಣ ಮಾಡಬೇಕಾಗುವುದೆಂದು ಕಾರ್ಮಿಕ ಮಂತ್ರಿ ಶ್ರೀ ಅಜೀಜ್ ಸೇಟ್‌ರವರು ಬೀಡಿ ಕಾರ್ಮಿಕರ ಸಂಘವನ್ನು ಉದ್ಘಾಟಿಸುತ್ತಾ ಹೇಳಿದರು.

★

ಲೋಹಗಳ ಪತ್ತೆ

ಉತ್ತರ ಪ್ರದೇಶದಲ್ಲಿ ತಾಮ್ರ, ಮೆಗ್ನಾಟಿಕ್ ಸುಣ್ಣ ಕಲ್ಲು ಮತ್ತಿತರ ಲೋಹಗಳು ಹೇರಳವಾಗಿ ದಾಸ್ತಾನು ಇರುವುದು ಪತ್ತೆ ಆಗಿರುವುದಾಗಿ ಲಕ್ನೋ ವಾರ್ತೆ ತಿಳಿಸುತ್ತದೆ.

●

ಭಾರತ ವಾಣಿಜ್ಯೋದ್ಯಮಿಗಳಿಗೆ ನೆರವು

ಪಶ್ಚಿಮ ಏರೋಪ್ಯ ಮಾರುಕಟ್ಟೆಗಳಿಗೆ ರಫ್ತು ಹೆಚ್ಚಿಸಲು ಭಾರತ ವಾಣಿಜ್ಯೋದ್ಯಮಿಗಳಿಗೆ ನೆದರ್ಲಾಂಡಿನ ಒಂದು ಕೇಂದ್ರ ಸಹಾಯ ಮಾಡುವುದಾಗಿ ನವ ದೆಹಲಿಗೆ ವರದಿ ಬಂದಿದೆ.

★

ಕಾಳಸಂತೆ ಮಟ್ಟಹಾಕಲು

ಕಡೂರು— ಅವಶ್ಯ ಪದಾರ್ಥಗಳ ಸೆಚ್ಚು ಪಾಸ್ತಾನು ಮತ್ತು ಕಾಳಸಂತೆ ವ್ಯಾಪಾರ ಮಟ್ಟಹಾಕಲು ತೀಕ್ಷ್ಣ ಶಿಕ್ಷೆ ವಿಧಿಸುವ ಕಾನೂನು ತರಲಾಗುತ್ತಿದೆ ಯೆಂದು ಆಹಾರ ಮಂತ್ರಿ ಶ್ರೀ ಈಶ್ವರ್ ಪತ್ರಿಕೆಯವರಿಗೆ ತಿಳಿಸಿದರು.

★

ಪುಕ್ಕಳ ಸಮ್ಮೇಳನ

ಬಳ್ಳಾರಿ— 24 ನೇ ಅಖಿಲ ಕರ್ನಾಟಕದ ಮುಕ್ಕಳ ಸಮ್ಮೇಳನವು ನವೆಂಬರ್ 13 ರಿಂದ 17 ರವರೆಗೆ ನಡೆಯುವುದು — ಸಮ್ಮೇಳನಕ್ಕೆ ರೂ 70000 ಬಜೆಟ್ಟನ್ನು ಜಿಲ್ಲಾ ಮಟ್ಟದಲ್ಲಿ ತಯಾರಿಸಲಾಗಿದೆ.

ಜಾಕಿಗಳ ಪ್ರತಿಭಟನೆ

ಬೆಂಗಳೂರು— ಈ ಕೇಂದ್ರದಲ್ಲಿ ತಮ್ಮ ವೃತ್ತಿ ಸಹೋದರ ಜಾಕಿಗಳಿಗೆ ರೇಸ್‌ನಲ್ಲಿ ಕುದುರೆ ಸವಾರಿ ಲೈಸೆನ್ಸ್ ಕೊಡಬಾರದೆಂದು ಪ್ರತಿಭಟಿಸಿ, 65 ಜಾಕಿಗಳು ತಾವು ಈ ಪ್ರಸ್ತುತ ರೇಸುಗಳಲ್ಲಿ ಕುದುರೆ ಸವಾರಿ ಮಾಡುವುದಿಲ್ಲವೆಂದು ಬೆಂಗಳೂರು ರೇಸ್ ಕ್ಲಬ್ಬಿಗೆ ತಿಳಿಸಿದ್ದಾರೆ

○

ಕಾಮರಾಜರು ಹೇಳೋದು

ಮದರಾಸು— ಕೆಲವು ಜನರು ನಿರೀಕ್ಷಿಸಿರುವಂತೆ, ಕಾಂಗ್ರೆಸ್ ಪಾರ್ಟಿ ಮತ್ತು ಡಿ ಎಂ ಕೆ ಹೊಡೆದಾಡುವುದಿಲ್ಲವೆಂದು ಹಳೆ ಕಾಂಗ್ರೆಸ್ ನಾಯಕ ಶ್ರೀ ಕಾಮರಾಜರು ಹೇಳಿದರು — ತಮ್ಮ ಸೇವೆಯನ್ನು ಜನರು ಇಚ್ಛಿಸುವವರೆಗೆ ತಾವು ರಾಜಕೀಯದಿಂದ ನಿವೃತ್ತಿ ಗೊಳ್ಳುವುದಿಲ್ಲವೆಂದೂ ಹೇಳಿದರು.

★

ಗಡಿ ವ್ಯಾಜ್ಯ

ಬೆಂಗಳೂರು— ಮೈಸೂರು–ಮಹಾರಾಷ್ಟ್ರ ಗಡಿ ವ್ಯಾಜ್ಯದ ಬಗ್ಗೆ ಎರಡು ರಾಜ್ಯಗಳ ಮಳೆಗಾಲದ ಶಾಸನಸಭಾಧಿವೇಶನ ನಂತರ ಮುಖ್ಯ ಮಂತ್ರಿಗಳು ಪ್ರಾಯಶಃ ಚರ್ಚಿಸುವರು –ಇತರ ಭೇದಭಾವದ ಸಂಧಾನಕ್ಕೆ ಕೇಂದ್ರ ಗೃಹ ಸ್ಟೇಟ್ ಮಂತ್ರಿ ಶ್ರೀ ಪಂತ್ ಸಹಾಯಮಾಡುವರು – ಇವರಲ್ಲಿ ಒಬ್ಬರಿಂದಕ್ಕೆ ಇರದಿದ್ದ ಪ್ರಧಾನಿಯವರನ್ನು ಸಂಚಾಯಿತಿಗೆ ಕೇಳಬಹುಹೆನ್ನಲಾಗಿದೆ.

★

ಶೇಕಡ 50 ಮತದಾನ

ಹುಣಸೂರಿನಲ್ಲಿ ನಿನ್ನೆ ನಡೆದ ಉಪ ಚುನಾವಣೆಯಲ್ಲಿ ನೂರನಲವತ್ತ ಎರಡು ಬೂತುಗಳಲ್ಲಿ ಸುಮಾರು ಶೇಕಡ 50ರಷ್ಟು ಮತದಾನ ನಡೆದಿದೆ ಈ ಸಂಧ್ಯಾಕ್ಷ ಶೇಲಿತಾಂಶ ಪ್ರಕಟವಾಗುವ ನಿರೀಕ್ಷೆ ಇದೆ.

★

ಶಾಸನಸಭೆಯಲ್ಲಿ ಗಲಾಟೆ

ಬೊಂಬಾಯಿ– ಎರಡು ತಿಂಗಳ ಕಾಲದ ಮಳೆಗಾಲದ ಶಾಸನಸಭಾಧಿವೇಶನವು ನಿನ್ನೆ ಪ್ರಾರಂಭನಾಯಿತು – ಜಿಲ್ಲಾ ಪರಿಷತ್ತಿನ ಚುನಾವಣೆಗೆ ನಾಮಕರಣಪತ್ರ ಸಲ್ಲಿಸಿದ ಒಬ್ಬ ಹರಿಜನನನ್ನು ಸವರ್ಣ ಹಿಂದೂಗಳು ಬಹಿಷ್ಕರಿಸಿದ ಮತ್ತು ಇತರರು ನೀರು ತೆಗೆದುಕೊಳ್ಳುವ ಭಾವಿಯಿಂದ ನೀರು ತೆಗೆದುಕೊಂಡ ಇಬ್ಬರು ಹರಿಜನ ಮಹಿಳೆಯರನ್ನು ಬಿತ್ತಲೆ ಮೆರವಣಿಗೆ ಮಾಡಿಸಿದುದರ ಬಗ್ಗೆ ಸರ್ಕಾರ ಕ್ರಮ ಕೈಗೊಳ್ಳದಿರುವುದರ ವಿಷಯವಾಗಿ ತರಲಾದ ಅವಸರದ ಸೂಚನೆಗೆ ಸ್ಪೀಕರು ಅವಕಾಶ ಕೊಡಲಿಲ್ಲವೆನ್ನು ಪ್ರತಿಭಟಿಸಿ ಎಲ್ಲಾ ವಿರೋಧ ಪಕ್ಷದ ಸದಸ್ಯರೂ ಸಭಾಪರಿತ್ಯಾಗ ಮಾಡಿದರು; ಮತ್ತೆ ಸ್ಪೀಕ್ಷಕರ ಗ್ಯಾಲರಿಯಲ್ಲಿ ಕುಳಿತಿದ್ದು ಕಲ್ಲು ಬೀರಿ, ಪುಸ್ತಕಪತ್ರಿಕೆಗಳನ್ನು ಸುಟ್ಟ ಇಬ್ಬರು ರಿಪಬ್ಲಿಕ್ ಪಾರ್ಟಿಯವರನ್ನು ಹೊರಕ್ಕೆ ಕರೆದುಕೊಂಡುಹೋಗಲಾಯಿತು.

★

ಸೂರ್ಯತಾಪದಿಂದ ಮರಣ

ದೇಶದ ಕೆಲವು ಕಡೆ ಸೂರ್ಯತಾಪದಿಂದ ಏಳ್ನೂರುಹದಿನೆಂಟು ಮಂದಿ ಸತ್ತಿರುವರು

★

ಅಡಳಿತಗಾರರಲ್ಲಿ ವಿನಂತಿ

ಮೈಸೂರಿನ ಸೆಂಟ್ ಫಿಲೋಮಿನಾ ಕಾಲೇಜ್ ಹಾಗೂ ಟೆರಿಷಿಯರ್ಯ ಕಾಲೇಜುಗಳಲ್ಲಿ ಕಳೆದ ವರ್ಷಗಳಲ್ಲಿ ಇದ್ದಂತೆ ಸಂಸ್ಕೃತ ಶಿಕ್ಷಣವನ್ನು ಮುಂದುವರಿಸಬೇಕೆಂದು ಮೈಸೂರು ವಿಶ್ವವಿದ್ಯಾನಿಲಯದ ಸಂಸ್ಕೃತ ಇಲಾಖೆಯು ಅವುಗಳ ಅಡಳಿತಗಾರರಿಗೆ ತಿಳಿಸಿದೆ.

●

ಕೆಲಸದಿಂದ ವಜ

ಎರಡೂವರೆ ಲಕ್ಷ ಬಂಗಾಲಿಗಳನ್ನು ಪಾಕಿಸ್ತಾನದಲ್ಲಿ ಕೆಲಸದಿಂದ ತೆಗೆಯಿಸುವಪಾಗಿ ಹರದಿಯಾಗಿದೆ.

ದೆವ್ವ!

1922 ರಲ್ಲಿ ಟ್ಯೂರೆ ಪೇಮನನ ಸಮಾಧಿಯನ್ನು ಪ್ರಾಚೀನ ಸಂಶೋಧನ ಇಲಾಖೆಯವರು ಅಗೆದರು. ಆತ ದೆವ್ವವಾಗಿ ಅಲೆಯುತ್ತಿದ್ದಾನೆಂದು ಎಷ್ಟೇ ಹೇಳಿದರೂ ಅವರು ಕೇಳಲಿಲ್ಲ. ಸಮಾಧಿಯನ್ನಗೆದು ಹಣವನ್ನು ಹೊರಗೆ ತೆಗೆದೊಡನೆಯೇ ಮುಖ್ಯಾಧಿಕಾರಿ ಲಾರ್ಡ್ ಕಾರ್ನಾರ್ವ ಚೀಳಿನ ಕಡಿತದಿಂದ ಸತ್ತನು; ಅಲ್ಲಿದ್ದ ಕೋಟ್ಯಾಧೀಶ ಜಾರ್ಜ್ ಚೆರೋಲ್ಡ್ ವಿಚಿತ್ರ ಖಾಯಿಲೆಗೆ ಬಲಿಯಾದನು; ಶವದ ಎಕ್ಸ್‌ರೇ ಫೋಟೋ ತೆಗೆದ ತರುಣರಿಬ್ಬರು ದುರಂತರದಲ್ಲಿ ಸತ್ತರು; ಇದರಲ್ಲಿ ಭಾಗವಹಿಸಿದ್ದ ಅನೇಕ ಅಧಿಕಾರಿಗಳಲ್ಲಿ ಒಬ್ಬಬ್ಬರು ಸಾನಾ ರೀತಿಯಿಂದ ಸತ್ತರಲ್ಲದೆ ಆ ಸಮಾಧಿಯಲ್ಲಿ ಒಕ್ಕಿದ ಅಮೂಲ್ಯ ವಸ್ತುಗಳನ್ನು ಕೈಯಲ್ಲಿ ಒಮ್ಮೆಯಾದರೂ ಮುಟ್ಟಿದ್ದ ಮಿಸ್ರ ಸೇನೆಯು ಕಮ್ಯಾಂಡರ್ ಇನ್ ಚೀಫ್ ಜನರಲ್ ಸರ್ ಆಸ್ಟೆಂಟ್ ಕೊಲೆಯಾದರು. [ಕೃ ಸಂ.]

●

ಟ್ಯಾಂಕರ್ ದುರಂತ

ಕಲ್ಕತ್ತಾ — ಒಂದು ಎಣ್ಣೇ ತುಂಬಿದಟ್ಯಾಂಕರ್ ಕೆನಾಲ್ ಪೂರ್ವ ರಸ್ತೆಯಲ್ಲಿ ಗೋಡೆಗೆ ಬಡಿದು ಡ್ರೈವರು ಮತ್ತು ಕ್ಲೀನರು ಮಡಿದರು.

★

ಗುಣವಿನ್ದೆರಂಗುಣವಂತ ವ್ಯಕ್ತಿಗಳ ಬೆಂಬಳ ಸಿಗದಿದ್ದಡೆ ಗುಣವಂತ ವ್ಯಕ್ತಿಯು ಹಿಂದೆ ಬೀಳುತ್ತಾನೆ; ಆ ಮೂಲ್ಯ ಮಾಣಿಕ್ಯವನ್ನು ಕೂಡಿಸಲು ಭಂಗಾರದ ಅಗತ್ಯ ಇದ್ದೇಇರುತ್ತದೆ — ಸುಭಾಷಿತ

Contribute Liberally

to the National Defence Fund

ವುಡ್‌ಲಾಂಡ್ 9-6-72ರಿಂದ ಅಮೋಘ 6ನೇ ವಾರ

.... ಚಿತ್ತಾಕರ್ಷಕ ಕನ್ನಡ ಚಿತ್ರ ....

ಹೃದಯ ಸಂಗಮ

ನಟಸಾರ್ವಭೌಮ ರಾಜಕುಮಾರ್, ಭಾರತಿ, ಬಾಲಕೃಷ್ಣ, ಅಶ್ವತ್ಥ್, ಪಂಡರಿಬಾಯಿ

ನಿರ್ದೇಶನ: ರಾಜಶ್ರೀ ಸಹೋದರರು ನಿರ್ಮಾಪಕರು: ಎಂ ಜಿ ಎಂ ಸಹೋದರರು

ಪ್ರತಿ ದಿನ 3 ಪ್ರದರ್ಶನಗಳು

ಬೆಳಗಿನ ಪ್ರದರ್ಶನ ಪ್ರತಿ ದಿನ 10-30 ಸಿಂಹಸ್ವಪ್ನ

ಅಪೂರ್ವ 9 6 72 ರಿಂದ

.... ಮನಮೋಹಕ ತಮಿಳು ಚಿತ್ರ ....

ಕರುಂದೇಳ್ ಕಣ್ಣಾಯಿರಂ

ಪಾತ್ರ— ಜೈ ಶಂಕರ್ (ದ್ವಿಪಾತ್ರದಲ್ಲಿ), ಲಕ್ಷ್ಮಿ, ಶಕುಂತಲಾ, ಮನೋಹರ್ ತೆಂಗಾಯಿ ಶ್ರೀನಿವಾಸ್, ಮನೋಭವ

ದಿನ 3 ಆಟಗಳು

Edited Printedand Published by Dharmapracharanirata M S Krishna Rao (Proprietor) at the Satyavadi Press Chamarajapuram Mysore 4

'ಮಾನವನು ಕೀಳು ಸೃಷ್ಟಿಯ ಧಣಿ, ಶ್ರೇಷ್ಠನೆನ್ನುವುದು ಸೊಕ್ಕಿನ 'ಕಲ್ಪನೆ' ಬದುಕಿಗೆ ಮಹತ್ ಶಕ್ತಿ ಕೊಡಲ್ಪಟ್ಟ ಅವನು ಮೃಗಸಾಮ್ರಾಜ್ಯದ ಧರ್ಮಕರ್ತ

— ಮಹಾತ್ಮಾ ಗಾಂಧಿ

ಈ ಸಂದೇಶ ಹೊತ್ತ ಚಿತ್ರ ಸಂದೇಶ್ ಶವರ ಜೊಚ್ಚಲು ಚಿತ್ರ

ಅನ-ಹುಡುಗ

SHAKTI

SUDHA

A Superb Tonic

ಅಖಿಲ ಭಾರತದಲ್ಲಿ ಕೂಡಲೇ

ಗೋವಧೆ ನಿಷೇಧವಾಗಲಿ

Quality Printing Neat Binding

Lakshminarasimha Press

Sivarampet, Mysore

Help The Gorakshana



— Humanitarian Propoganda Monthly ....